ಅಸಲು ದಾವಾ 56/2024 ಪಿ ಡಬ್ಲ್ಯೂ - 1 -ಗೌತಮ್

**ಸಾಕ್ಷಿಯನ್ನು ದಿನಾಂಕಃ 23.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಜಿ ಸಿ ಎಸ್ ವಕೀಲರಿಂದಃ**

1. ನಾನು ಪದವೀಧರ. ನಮ್ಮ ಕುಟುಂಬದ ಬಗ್ಗೆನನಗೆ ಎಲ್ಲಾ ಮಾಹಿತಿ ಚೆನ್ನಾಗಿ ಗೊತ್ತಿದೆ. ಈ ನ್ಯಾಯಾಲಯದ ಮುಂದೆ ಇರುವ 1 ನೇ ಪ್ರತಿವಾದಿ ನನ್ನ ತಂದೆಯ ತಂಗಿ ಮಗಳು ಆಗಿರುತ್ತಾರೆ. ನಮ್ಮ ತಾತನ ಹೆಸರು ಸಿದ್ದಾಚಾರ್. ನನ್ನ ಅಜ್ಜಿಯ ಹೆಸರು ರಾಜೇಶ್ವರಿ. ನನ್ನ ತಾತನ ಒಡಹುಟ್ಟಿದವರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಇಬ್ಬರು ಗಂಡು ಮಕ್ಕಳು ಮತ್ತು 4 ಜನ ಹೆಣ್ಣುಮಕ್ಕಳು. ಅವರ ಹೆಸರು ರಾಜು, ರವಿ, ಗೌರಿ, ಪಾರ್ವತಿ, ರಾಜೇಶ್ವರಿ ಮತ್ತು ಸರೋಜಮ್ಮ. ನನ್ನ ತಾತ ಸಿದ್ದಾಚಾರಿ ಮೃತ ಪಟ್ಟು 20 ವರ್ಷಗಳಾಗಿವೆ. ದಾವಾ ಆಸ್ತಿಗಳನ್ನು ನನ್ನ ತಾತ ಸಿದ್ದಾಚಾರಿ ಖರೀದಿಸಿದ್ದರು. ದಾವಾ ಆಸ್ತಿಗಳನ್ನು ನನ್ನ ತಾತ ಖರೀದಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಮತ್ತು ಅವರ ತಮ್ಮ ವಿಭಾಗ ಮಾಡಿಕೊಂಡಾಗ ಎಷ್ಟು ಆಸ್ತಿ ನನ್ನ ತಾತನಿಗೆ ಬಂದಿತ್ತು ಎಂದರೆ ಸ್ವಲ್ಪ ಆಸ್ತಿ ಬೇರೆ ಊರಿನಲ್ಲಿ ಬಂದಿತ್ತು, ನಿಖರವಾಗಿ ಹೇಳಲು ಗೊತ್ತಿಲ್ಲ. ನನ್ನ ತಂದೆಗೆ ಆಸ್ತಿ ನನ್ನ ತಾತನಿಂದ ಬಂದಿರುತ್ತದೆ. ನನ್ನ ತಾತ ನನ್ನ ತಂದೆಗೆ ಮತ್ತು ದೊಡ್ಡಪ್ಪನಿಗೆ ಹೇಗೆ ಆಸ್ತಿಗಳನ್ನು ಕೊಟ್ಟಿದ್ದರು ಎಂಬ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಆ ರೀತಿ ಕೊಡಲು ತೊಂದರೆ ಇದೆಯಾ ಎಂದರೆ, ಕೊಡಲು ಪ್ರಯತ್ನಿಸುತ್ತೇನೆ. ನನ್ನ ತಾತ ಸಿದ್ದಾಚಾರಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನಿಗೆ ಆಸ್ತಿಗಳನ್ನು ಹಂಚಿಕೆ ಮಾಡಿದ್ದಾರೆ. ಉಳಿದ ಮಕ್ಕಳಿಂದ ಹಕ್ಕು ನಿವೃತ್ತಿ ಪತ್ರ ಮಾಡಿಸಿಕೊಂಡಿದ್ದಾರಾ ಎಂದರೆ ಮಾಡಿಸಿಕೊಂಡಿರಬಹುದು. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ಕೇಳಿ ನೋಡಿ ಹಾಜರು ಪಡಿಸಬೇಕು.

2. ನನ್ನ ತಂದೆ ಮತ್ತು ಅವರ ತಂಗಿ ಪಾರ್ವತಮ್ಮ ಆತ್ಮೀಯವಾಗಿ ಇದ್ದಾರೆ ಎಂದರೆ ಸರಿ. ಈಗ ನಾವು ನನ್ನ ತಂದೆಯೊಂದಿಗೆ ಚೆನ್ನಾಗಿದ್ದೇವೆ ಎಂದರೆ, ನಮ್ಮ ತಂದೆ ನಮ್ಮ ಜೊತೆ ಇಲ್ಲ. ನನ್ನ ತಂದೆಗೆ ಅನಾರೋಗ್ಯವಾಗಿದ್ದಾಗ 1 ರಿಂದ 3 ನೇ ಪ್ರತಿವಾದಿಯರ ತಾಯಿ ಪಾರ್ವತಮ್ಮ ನನ್ನ ತಂದೆಯನ್ನು ನೋಡಿಕೊಂಡಿದ್ದಾರೆ ಎಂದರೆ ಎಲ್ಲಾ ಅಕ್ಕ ತಂಗಿಯರು ನೋಡಿಕೊಂಡಿದ್ದಾರೆ. 1 ರಿಂದ 3 ನೇ ಪ್ರತಿವಾದಿಯರ ತಾಯಿ ಪಾರ್ವತಮ್ಮ ನನ್ನ ತಂದೆಗೆ ಕಷ್ಟ ಇದ್ದಾಗ 200 ಗ್ರಾಂ ಚಿನ್ನವನ್ನು ನನ್ನ ತಂದೆಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3. ನಾನು ಈ ಕೇಸ್ ನಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ನನ್ನ ತಾಯಿಯವರು ಹೇಳಿ ಬರೆಸಿದ್ದಾರೆ. ದಾವಾ ಆಸ್ತಿಗಳ ಅಸೆಸ್ ಮೆಂಟ್ ನಂಬರ್ ಹೇಳಲು ಆಗುತ್ತದೆಯಾ ಎಂದರೆ ಮೊದಲನೆ ಆಸ್ತಿಯ ನಂಬರ್ 576, 2 ನೇ ಆಸ್ತಿಯ ನಂಬರ್ 654 ಎಂಬುದು ಕೊನೆಯ 3 ನಂಬರ್ ಗಳು ಆಗಿರುತ್ತವೆ. ನನಗೆ ಈ ದಾವೆಯ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲದೇ ಇದ್ದರೂ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು 4 ನೇ ಪ್ರತಿವಾದಿಯೇ ಪಾರ್ವತಮ್ಮನವರಿಗೆ 10 ವರ್ಷಗಳಿಗೆ ಭೋಗ್ಯ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮೂಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಮೋಹನಕುಮಾರಿ ಎನ್. ಬಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.

**ಅಸಲು ದಾವಾ 56/2024 ಪಿ ಡಬ್ಲ್ಯೂ - 1 -ಗೌತಮ್**